ಹೆಸರು; ಮರೆತುಹೋದೆ. ಅವರು ಹೋದ ಮೇಲೆ ಮ್ಯಾಗಝೀನ್ ನಡೆಸುವವರಿಲ್ಲದೆ ಅದು ನಿಂತೇಹೋಯಿತು.

ನಾನು ಹಳೆಯ ಸಂಚಿಕೆಗಳನ್ನು ಹುಡುಕಾಡಿ ಪತ್ತೆ ಮಾಡಿದೆ. ಅವರ ಫೋಟೊ ಕೂಡ ಅಚ್ಚಾಗಿತ್ತು. ಸಾಕಷ್ಟು ಇಂಗ್ಲಿಷ್ ಕವಿತೆಗಳನ್ನು ಅನುವಾದ ಮಾಡಿ ಹಾಕಿದ್ದರು. ಧಾರಾವಾಹಿ ರೂಪದ ಕಾದಂಬರಿ 'ಉಸುಬು' ಓದಲು ಸಿಕ್ಕಿತು. ಸುಮಾರು ಸಂಚಿಕೆಗಳನ್ನು ಕೋಣೆಗೆ ಎತ್ತಿಕೊಂಡು ಬಂದೆ. ಬಾಕಿ ಲೇಖನ ಕವಿತೆಗಳಿಗಿಂತ ಧಾರಾವಾಹಿ ಓದಲು ಸೊಗಸಾಗಿತ್ತು. ಯಾಕೆ ಇದಕ್ಕೆ 'ಉಸುಬು' ಎಂದು ಹೆಸರು ಇಟ್ಟಿದ್ದಾರೆಂದು ಎಷ್ಟು ಯೋಚಿಸಿದರೂ ಹೊಳೆಯಲಿಲ್ಲ. ಅವರೂ ಇದರ ಬಗ್ಗೆ ಏನೂ ಟಿಪ್ಪಣಿ ಮಾಡಿರಲಿಲ್ಲ.

ನನ್ನ ಈ ಆಸಕ್ತಿ, ಉತ್ಸಾಹ ಮಂದಾಕಿನಿಗೆ ಇಷ್ಟವಾಯಿತು. ಒಂದು ಭಾನುವಾರ ನನ್ನನ್ನು ತನ್ನ ಮನೆಗೆ ಬರುವಂತೆ ಕರೆದಳು. ಒಂದೇ ರಸ್ತೆ. ಈ ಕೊನೆಗೆ ನನ್ನ ಕೋಣೆ; ಆ ಕೊನೆಗೆ ಆಕೆಯದು. ಬೆಳಿಗ್ಗೆ ಹನ್ನೊಂದರ ಸುಮಾರಿಗೆ ಅವರಲ್ಲಿಗೆ ಹೋದೆ. ಮನೆ ಚಿಕ್ಕದಾದರೂ ಓರಣವಾಗಿತ್ತು. ಹಾಲಿನಲ್ಲಿಯೇ ಸುಂದರಮೂರ್ತಿಯವರ ದೊಡ್ಡ ಫೋಟೊ ಇಟ್ಟಿದ್ದರು. ಅದಕ್ಕೆ ಹಾಕಿದ್ದ ಹಾರಕ್ಕೆ ಯೌವನ ಕಳೆದುಹೋಗಿತ್ತು.

ತಾಯಿ ಎಂದು ಅರವತ್ತರ ಆಸುಪಾಸಿನ ಒಬ್ಬರನ್ನು ಪರಿಚಯಿಸಿದಳು. ಅನಂತರ ತಂಗಿ ಎಂದು ಇವಳಿಗಿಂತ ಎಂಟ್ಹತ್ತು ವರ್ಷಕ್ಕೆ ಚಿಕ್ಕವಳಂತಿದ್ದ ಮತ್ತೊಬ್ಬಳನ್ನು ಭೇಟಿ ಮಾಡಿಸಿದಳು. ಮೇಲಿನ ಕೋಣೆಯಿಂದ ಕೆಮ್ಮುವ ದನಿಯೊಂದು ನಿರಂತರವಾಗಿ ಕೇಳಿಸುತ್ತಿತ್ತು. ನಾನು ಮಂದಾಕಿನಿಯನ್ನು ಕೇಳದಿದ್ದರೂ ಅವಳಾಗಿಯೇ 'ಸಂಬಂಧಿಕರೊಬ್ಬರು ಬಂದಿದ್ದಾರೆ; ಮೇಲಿದ್ದಾರೆ; ಸ್ವಲ್ಪ ಅನಾರೋಗ್ಯ' ಎಂದಳು.

ಊಟಕ್ಕೆ ಕೂತಾಗ ವಾಸನೆಯಿಂದಲೇ ನಾನು ಹೇಳಿದೆ: 'ನಾನು ವೆಜಿಟೇರಿಯನ್!' 'ಅಪ್ಪನೂ ವೆಜಿಟೇರಿಯನ್ನೆ!' ಎಂದ ಮಂದಾಕಿನಿ ಆಗಷ್ಟೇ ಟೇಬಲ್ ಮೇಲೆ ಇಟ್ಟ ಆ ಮಾಂಸದೆಸರನ್ನು ಹಾಗೆಯೇ ಎತ್ತಿ ಒಳಕ್ಕೊಯ್ದಳು. 'ಹತ್ತೇ ನಿಮಿಷ ಬೇಳೆ ಹಾಕಿ ತಿಳಿಸಾರು ಮಾಡಲು; ಅಲ್ಲಿತನಕ ಇದನ್ನ ತಗೋತಾ ಇರಿ' ಎಂದು ತರಹೆವಾರಿ ಡ್ರೈಫ್ರೂಟ್ಸ್ ತಂದಿಟ್ಟಳು. ಬಾಯಿಗೆ ಹಾಕಿಕೊಳ್ಳುತ್ತ ಮನೆಯನ್ನೆಲ್ಲ ತಲಾಶು ಕಣ್ಣುಗಳಿಂದ ಬೆದಕುತ್ತಾ ಕೂತೆ.

'ಹತ್ತು ನಿಮಿಷದ ತಿಳಿಸಾರು' ತಯಾರಾಗಲು ಅರ್ಧ ತಾಸು ಹಿಡಿಯಿತು. ಮಜ್ಜಿಗೆಯಲ್ಲಿ ಮಾತ್ರ ಊಟ ಮಾಡಿದಂತಾಯಿತು. ಊಟದ ನಂತರ ವರಾಂಡದಲ್ಲಿ ಇಬ್ಬರೂ ಕೂತೆವು. ಮಂದಾಕಿನಿ ರಸ್ತೆಯತ್ತ ನೋಡುತ್ತಾ ಹೇಳಿದಳು: 'ಅಪ್ಪ ಮಾಂಸ ತಿನ್ನುವ ಕುಟುಂಬದಲ್ಲೇ ಅಂತೆ ಹುಟ್ಟಿದ್ದು. ಮದುವೆ ಅನಂತರ ಅವರು ಆರ್ಯ ಸಮಾಜದ ತತ್ವಗಳನ್ನು ಪಾಲಿಸೋರಂತೆ. ಮನೆಯಲ್ಲೂ ಅದು ಕೂಡದೆಂದು ಹಟ ಹಿಡಿಯುತ್ತಿದ್ದರಂತೆ. ಇದು ಅಪ್ಪಅಮ್ಮನ ನಡುವೆ ಜಗಳಕ್ಕೆ ಕಾರಣವೂ ಆದದ್ದಿದೆ.'

'ನನ್ನ ತಂಗಿ ಜೊತೆ – ಈಗಷ್ಟೇ ನಿಮಗೆ ಪರಿಚಯಿಸಿದೆನಲ್ಲ – ಅಪ್ಪ ತುಂಬಾ ಚೆನ್ನಾಗಿರುತ್ತಿದ್ದರು. ನನ್ನ ಜೊತೆ ಮಾತು ಕಮ್ಮಿ. ಯಾಕೆಂದು ನನಗೆ ಅರ್ಥವಾಗುತ್ತಿರಲಿಲ್ಲ. ಅಮ್ಮ ಕೂಡ ಈ ಬಗ್ಗೆ ಆಗಾಗ ಅಪ್ಪನ ಜೊತೆ ಜಗಳ ತೆಗೆಯುತ್ತಿದ್ದರು. ಇವಳು ನಿಮ್ಮ ಮಗಳು ತಾನೆ ಎಂದು ಒತ್ತಿ ಒತ್ತಿ ಅಮ್ಮ ಹೇಳುವಾಗ ಕಣ್ಣೀರಾಗುತ್ತಿದ್ದರು. ಅಪ್ಪ ಮಾತ್ರ ಮೌನವಾಗಿಬಿಡುತ್ತಿದ್ದರು. ಅಪ್ಪನಿಗೆ ಕಾಲೇಜಿನಲ್ಲಿ ಒಳ್ಳೆಯ ಹೆಸರಿತ್ತು. ಅವರು ನಿರಂತರ ಓದುತ್ತಲೇ ಇರುತ್ತಿದ್ದರು. ಮಹಡಿ ಮೇಲೆ ಸ್ಟಡಿ ರೂಮ್ ಮಾಡಿಕೊಂಡು ಓದು–ಬರಹ ಮಾಡುತ್ತಿದ್ದರು. ನೀವು ಧಾರಾವಾಹಿ ಅಂದಿರಲ್ಲ, ಅದರ ಹೆಸರು...' ನಾನು 'ಉಸುಬು' ಅಂದೆ. 'ಹೌದೌದು... ಅದೇ. ಅದನ್ನು ನೀವು ಕೂತಿದ್ದೀರಲ್ಲ, ಇದೇ ಕುರ್ಚಿಯನ್ನು ವರಾಂಡದಲ್ಲಿ ಮೇಜಿಗೆ ಹಾಕಿಕೊಂಡು ಬರೆಯುತ್ತಿದ್ದರು.' ನಾನು ಕುರ್ಚಿಯನ್ನೊಮ್ಮೆ